**ಸ್ನೇಹಿತರೆ,**

ಈ ಕೆಳಗಿನ ಅಂಶಗಳನ್ನು ಒಳಗೊಂಡ ಮಾಹಿತಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಸತ್ಯವಾ? ಅಥವಾ ಫೇಕ್ ಮಾಹಿತಿಯಾ? ಎಂದು ಹಲವರು ಕೇಳಿದರು. ನಾನು ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರ ಕಚೇರಿಗೆ ಫೋನ್ ಮಾಡಿ ತಿಳಿದುಕೊಂಡಿರುವೆ. ಈ ವಿಷಯವು ಫೇಕ್ ಅಲ್ಲ. ಇದು ಸತ್ಯವಾದ ಮಾಹಿತಿ. ನಿಮ್ಮ ಸುತ್ತ ಮುತ್ತ ಇರುವವರಿಗೆ ಈ ಮಾಹಿತಿಯನ್ನು ನೀಡಿ. ಅವರು ಅರ್ಜಿ ಸಲ್ಲಿಸಲು ನೆರವಾಗಿ.

* ಪ.ಜಾತಿಗಳಿಗೆ ಸೇರಿದವರು ಕೊವಿಡ್-19 ಸಾಂಕ್ರಾಮಿಕ ರೋಗಕ್ಕೆ ಬಲಿಯಾಗಿ, ಮೃತಪಟ್ಟಿರಬೇಕು.

* ಅಂಥವರ ಕುಟುಂಬದಲ್ಲಿ ನಿಯಮಾನುಸಾರ ಅರ್ಹರಿರುವ ವ್ಯಕ್ತಿ ಇರಬೇಕು.

* ಇವರು ಸ್ವಯಂ ಉದ್ಯೋಗ, ಕೌಶಲ್ಯಾಭಿವೃದ್ಧಿ ಸಂಸ್ಥೆಗಳಿಂದ ತರಬೇತಿ ಪಡೆದಿರಬೇಕು.

* ಇವರು ಸಣ್ಣ ಮತ್ತು ಮಧ್ಯಮ ಉದ್ದಿಮೆ ಹಾಗೂ ಲಾಭದಾಯಕ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಸಿದ್ಧರಿರಬೇಕು.

* ಇವರಿಗೆ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದಿಂದ ಗರಿಷ್ಠ ಸಹಾಯ ಧನ ರೂ.1ಲಕ್ಷ (ರೂಪಾಯಿ ಒಂದು ಲಕ್ಷ) ದೊರಕುತ್ತದೆ.

* ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಅಭಿವೃದ್ಧಿ ನಿಗಮ (NSFDC -National Scheduled Caste Finance Development Corporation) ನವದೆಹಲಿ ಇವರಿಂದ ಗರಿಷ್ಠ ರೂ. 4ಲಕ್ಷ (ರೂಪಾಯಿ ನಾಲ್ಕು ಲಕ್ಷ) ದೊರಕುತ್ತದೆ.

* ಇದೆಲ್ಲವೂ ರಾಷ್ಟ್ರೀಯ ನಿಗಮದಿಂದಲೇ ನೇರವಾಗಿ ಫಲಾನುಭವಿಗೆ ದೊರಕುತ್ತದೆ.

* ಕರ್ನಾಟಕ ಸರ್ಕಾರದ ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇದರ ಎಲ್ಲಾ ಜಿಲ್ಲಾ ವ್ಯವಸ್ಥಾಪಕರು ಈ ಮಾಹಿತಿಯನ್ನು ಜಿಲ್ಲೆಯ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಇವರುಗಳಿಂದ ಅಧಿಕೃತವಾಗಿ ಸಂಗ್ರಹ ಮಾಡುತ್ತಿದ್ದಾರೆ.

**ಮಂಗ್ಳೂರ ವಿಜಯ**
94491-02294